೨) ಉತ್ತರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವ್ಯವಸಾಯ. ಮಾರುಕಟ್ಟೆ ಸಹಕಾರ ಸಂಘಗಳ ಚುನಾವಣೆಗಳನ್ನು ಮುಂದಕ್ಕೆ ಹಾಕುವುದು.

ಶ್ರೀ ಗೋಪಾಲ ಮಂಕಿಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವ್ಯವಸಾಯ ಮಾರುಕಟ್ಟೆ, ಸಹಕಾರ ಸಂಘಗಳ ಚುನಾವಣೆಗಳು ಜೂನ್ ತಿಂಗಳ ಮಳೆಗಾಲದಲ್ಲಿ ನಡೆಯುವುದರ ಪ್ರಯುಕ್ತ ಮುಂದಕ್ಕೆ ಹಾಕುವ ಬಗ್ಗೆ ಧಾರ್ಮಿಕ ದತ್ತಿ ಹಾಗೂ ನಿಯಂತ್ರಿತ ಮಾರುಕಟ್ಟೆ ರಾಜ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಅವಂರನಾಥ್‌ಶೆಟ್ಟಿ (ಧಾರ್ಮಿಕ ದತ್ತಿ ಹಾಗೂ ನಿಯಂತ್ರಿತ ಮಾರುಕಟ್ಟೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಇದನ್ನು ಮುಂದಕ್ಕೆ ಹಾಕಿದ್ದೇವೆ. ಸೆಪ್ಟೆಂಬರ್ ೧೫ರಿಂದ ಅಕ್ಟೋಬರ್ ೧೫ರ ಒಳಗೆ ಈ ಚುನಾವಣೆ ಮಾಡುವುದು ಎಂದು ಈಗ ಇದನ್ನು ಮುಂದಕ್ಕೆ ಹಾಕಿದ್ದೇವೆ.

ಅಧ್ಯಕ್ಷರು.—ಇದಕ್ಕೆ ಸಂಬಂಧಪಟ್ಟ ಸ್ಟೇಟ್‌ಮೆಂಟ್‌ನ್ನು ತಾವು ಓದಿಬಿಡಿ.

ಶ್ರೀ ಕೆ. ಅವಂರನಾಥ್ ಶೆಟ್ಟಿ.—ಸರ್ಕಾರವು ಈಗಾಗಲೇ ಉದ್ದೇಶಿಸಿದಂತೆ ಎಲ್ಲಾ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಜೂನ್ ೧೯೫೮ ಮತ್ತು ಅನಂತರ ನಡೆಸಬೇಕಾಗಿದ್ದ ಚುನಾವಣೆಗಳನ್ನು ರೈತರ ಹಿತದೃಷ್ಟಿಯಿಂದ ಮುಂದಿನ ಆದೇಶದವರೆಗೆ ಮುಂದೂಡಲಾಗಿದೆ; ಹಾಗೂ ನಿಗದಿತ ಕಾಲಾವಧಿ ಮುಗಿದ ಸಮಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಲೂ ಕೂಡ ಆದೇಶಿಸಲಾಗಿದೆ.

ಶ್ರೀ ಜಿ.ಎಸ್. ಅಚಾರ್.—ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು.—ತಮ್ಮ ಬೇಡಿಕೆಯನ್ನು ಮಾನ್ಯ ಮಂತ್ರಿಗಳು ಈಡೇರಿಸಿದ್ದಾರೆ. ಆದ್ದರಿಂದ ಇದನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಈಗ ಶ್ರೀ ಟಿ.ಎಸ್. ಮಣಿ ಅವರ ಹೆಸರಿನಲ್ಲಿರುವ ಗಮನ ಸೆಳೆಯುವ ಸೂಚನೆಯನ್ನು ಅವರ ಪರವಾಗಿ ಶ್ರೀ ವೆಂಕಟರಾಮಯ್ಯನವರು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಹುದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ,.....

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಆಹಾರ ಮಂತ್ರಿಗಳು ಸಭೆಯಲ್ಲಿ ಇಲ್ಲದಿರುವ ಪ್ರಯುಕ್ತ ಮುಂದಿನ ಗಮನ ಸೆಳೆಯುವ ಸೂಚನೆಯನ್ನು ತಾವು ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಆಗಬಹುದು.

೩) ಹಿರಿಯೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ದಲಚಂದ್ ಮತ್ತು ಅವರ ಕುಟುಂಬದವರ ಮೇಲೆ ರಾಘವೇಂದ್ರ ಹೋಟೆಲ್ ಮಾಲಾಕರು ಹಲ್ಲೆ ನಡೆಸಿರುವುದು.

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಹಿರಿಯೂರು ನಗರದ ಮುರ್ಚೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷರು ಹಾಗೂ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಜೆ. ದಲಿಚಂದ್ ಮತ್ತು ಅವರ ಇಡೀ ಕುಟುಂಬದವರ ಮೇಲೆ ರಾಘವೇಂದ್ರ ಹೋಟೆಲ್ ಮಾಲೀಕ ಶ್ರೀ ವೆಂಕಟೇಶ್ ಮತ್ತು ಹೋಟೆಲ್ ನೌಕರರು ನಡೆಸಿರುವ ಹಲ್ಲೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೀರಣ್ಣ (ಸಣ್ಣ ಉಳಿತಾಯ ಮತ್ತು ಬಂದಿಖಾನೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಹಿರಿಯೂರಿನಲ್ಲಿ ಹುಳಿಯಾರ ರಸ್ತೆಯಲ್ಲಿರುವ ಶ್ರೀಯುತ ಕೆ.ಆರ್. ವೆಂಕಟೇಶ್ ಇವರಲ್ಲಿ ರಾಘವೇಂದ್ರ ಹೋಟಲಿನ ಮುಂದೆ ಹೊಸಪೇಟೆ ಕೆ.ಎಸ್.ಆರ್.ಟಿ.ಸಿ. ಮತ್ತು ಖಾಸಗಿ ಬಸ್ಸುಗಳು ಇವು ಕಾಲ ನಿಲ್ಲಿಸುತ್ತಾರೆ. ಈ ಸಮಯದಲ್ಲಿ ಪ್ರಯಾಣಿಕರು ತಿಂಡಿ ತಿನಿಸುಗಳನ್ನು ತಿನ್ನುತ್ತಾರೆ.